ಹಾಕುತ್ತಿದ್ದಳು. ಅದು ಪಂಚಾಮೃತವೆಂಬಂತೆ ಚಪ್ಪರಿಸಿಕೊಂಡು ತಿನ್ನುತ್ತಿದ್ದೆವು, ತಿನ್ನುತ್ತಲೇ ಇರುತ್ತಿದ್ದೆವು. ದಬರಿ ಖಾಲಿಯಾದರೂ ಸಹ ಹಾಗೆ ಕೈ ಚಾಚಿಕೊಂಡು ಕುಳಿತೇ ಇರುತ್ತಿದ್ದೆವು. ಅವ್ವನಿಗೆ ಒಂದು ಇಂಕರವೂ ಉಳಿತಾ ಇರ್‍ನಿಲ್ಲ. ಅಷ್ಟಕ್ಕೂ ನಮ್ಮ ಹೊಟ್ಟೆಯೂ ತುಂಬುತ್ತಿರಲಿಲ್ಲ. ಅವ್ವ ತಿಂದ್ಲಾ? ಇಲ್ವಾ?, ಹಸಿಕಂಡೆ ಮಂಕಡ್ಳ? ಅಂತನೂ ನಮಗೆ ಗೊತ್ತಾಗ್ತರ್‍ನಿಲ್ಲ. ಬಡವರ್‍ಗೆ ಹಸಿವು ಜಾಸ್ತಿ ಅಂತಾರಲ್ಲ ಅಂಗೆ, ಅವ್ವ ಕೂಲಿನಾಲಿ ಮಾಡಿ ಮೇಲಟ್ಟೆಯೋರು ಕೊಟ್ಟ ತಂಗಳಿಂದ ಹೊಟ್ಟೆ ತುಂಬಿಸುತ್ತಿದ್ದಳಲ್ಲ, ಅದೇ ನಮ್ಮ ಪುಣ್ಯ.

ಇಡೀ ರಾತ್ರಿ ಕಿವಿನಾಗ ಬಂದು, 'ಸೂಯ್ ಸೂಯ್' ಅಂತ ಲಾಲಿ ಹಾಡೊ ಸೊಳ್ಳೆಗಳು, ಚಾಪೆಯಲ್ಲಿ ಅಡಗಿ ಕುಂತು, ನಡು ರಾತ್ರಿನಾಗ ಕಳ್ನಂಗೆ ಸದ್ದೇ ಮಾಡ್ದೆ ಹೊರಕ್ ಇಣ್ಕೊಂಡು ನಮ್ಮಗಳ ಮೈಮೇಲೆ ಸಂತೋಸದಿಂದ ಹರಿದಾಡುತ್ತಾ ರಕ್ತ ಕುಡಿಯೊ ತಿಗಣೆಗಳು, ಅಷ್ಟು ಸಾಲ್ದು ಅಂತ ತಂಗಿ ತಲೆಯಿಂದ ನನ್ನ ತಲೆಗೆ ಸರಾಗವಾಗಿ ಹರ್‍ದು, ಕೈ ಹಾಕಿದಲೆಲ್ಲಾ ಕಡಲೆ ಗಾತ್ರದ ಹೇನುಗಳು ಸಿಕ್ಕೊವು, ಆ ಕತ್ಲಲ್ಲೇ ಕೈಗೆ ಸಿಕ್ಕ ಹೇನ್‌ಗಳ ಹಿಡ್ಕಂಡು ಎಲ್ಡು ಕೈಗಳ ಹೆಬ್ಬಟ್ಟುಗಳ ಮಧ್ಯ ಇಕ್ಕಂಡು ಕುಕ್ಕೋದು ಒಂತರ ಕುಸಿ. ಸೊಳ್ಳೆ, ತಿಗಣೆ, ಹೇನ್ಗಳೆಲ್ಲಾ ನಮ್ಮ ರಕ್ತದಿಂದಲೇ ಕೊಬ್ಬಿ ಹೋಗಿದ್ದವು.

ಬೆಳ್ಗಾನ ಎದ್ದಿದ್ದೇ ಅವ್ವ ಕಕ್ಕಸ್ ಮಾಡಕ್ಕೆ ನಮ್ನ ಬೀದಿ ಬದಿ ಕುಂಡ್ರಿಸಿ ತಾನು ಬೇಲಿ ಬದಿಗೆ ಹೋಗ್ಬರೋಳು. ನಾನು ನನ್ನ ತಂಗಿ ಕಕ್ಕಸು ಮಾಡಿ ಮನೆ ಬಳಿಯ ಚರಂಡಿ ಬದಿ ಕುಂತು ಕುಂಡಿ ತೊಳಕೋತಾ ಇದ್ವಿ. ಒಂದು ಚೊಂಬು ನೀರಲ್ಲಿ ಇಬ್ಬರ ಶೌಚವೂ ಮುಗಿತ್ತಿತ್ತು. ಸೋಪಿರ್‍ಲಿ, ಸುಡುಗಾಡ್ನು ಕಂಡರ್‍ನಿಲ್ಲ. ಅವ್ವನೂ ಒಂದ್ ಚೆಂಬ್ ನೀರ್‍ನಲಿ ಕುಂಡಿ ತೊಕ್ಕಂಡು, ಮುಖ ತೊಕ್ಕಂಡು ಬರೋಳು. ಸ್ನಾನ ಅಂಬೋದು ಗೊತ್ತೇರ್‍ನಿಲ್ಲ, ವರ್ಷದಾಗ ಎಲ್ಡೊ ಮೂರೊ ಸರ್ತಿ ಮೈ ತೊಕ್ಕೊತಿದ್ವಿ, ತಲೆಗೆ ಎಣ್ಣೆ, ಮೈಗೆ ಸೋಪು ನೋಡೆ ಗೊತ್ತಿರ್‍ನಿಲ್ಲ.

ಬಹುಶಃ ನನಗೆ ಐದಾರು ವರ್ಷವಿರಬೇಕು, ಹರಿದ ಚಡ್ಡಿ, ಯಾರೋ ಕೊಟ್ಟಿದ್ದ ದೊಗಳೆ ಷರ್ಟ್ ಹಾಕಿಕೊಂಡು ಸಿಂಬಳ ಸುರಿಸಿಕೊಂಡು ಜೊತೆ ಹೈಕ್ಳೊಂದಿಗೆ ಗೋಲಿ ಆಡ್ತಾ ಅಲ್ಲಿ ಇಲ್ಲಿ ಅಡ್ಡಾಡುವಾಗ ಒಮ್ಮೊಮ್ಮೆ ಮೇಲ್ಜಾತಿ ಮನೆಯವರು 'ಏಯ್ ಹುಡುಗ ಬಾ ಇಲ್ಲಿ, ಚರಂಡಿಗೆ ಮಗು ಬಾಲು ಬಿಸಾಕಿದೆ ಒಂಚೂರು ತಕ್ಕೊಡು' ಎನ್ನುತ್ತಿದ್ದರು. ಆ ಚರಂಡಿಯಲ್ಲಿ ಆ ಮನೆಯ ಮಕ್ಕಳು ಮಾಡುತ್ತಿದ್ದ ಹೇಲು- ಉಚ್ಚೆಯೊಳಗೆ ಇಳಿದು ಕೈ ಹಾಕಿ ಆ ಕೊಳಕನ್ನು ಗಬರಾಡಿ ಚೆಂಡ ಹುಡ್ಕಿ ಕೈಗೆತ್ಕಂಡು ಬಂದು ಅವರ ಮನೆ ಮೆಟ್ಟಿಲ ಮೇಲಿಟ್ಟರೆ ಅದಕ್ಕೆ ತಂಬಿಗೆ ತುಂಬಾ ನೀರು ಸುರಿದು ತೊಳ್ಕೋತಿದ್ದರು. ನಂಗೆ ನನ್ನ ಕೈ ಕಾಲು ತೊಳ್ಕೊ ಬೇಕಂತ ಗೊತ್ತೇ ಇರ್ನಿಲ್ಲ. ಅವರು ಒಂದು ಚೆಂಬು ನೀರನ್ನು ನನ್ನ ಮೇಲೆ ಸುರೀತಾನೂ ಇರ್‍ನಿಲ್ಲ. ಚರಂಡಿಯಿಂದ ಮೇಕೆದ್ದು ಬಂದು ಕೈ ಕಾಲುಗಳಿಗೆ ಮೆತ್ತಿಕೊಂಡಿದ್ದ ಕಕ್ಕಸ್ಸನ್ನು ಕಸವನ್ನು ಕೊಡವಿಕೊಂಡು ಹಾಗೆ ದೊಗಳೆ ಅಂಗಿಯ ತುದಿಯಿಂದ ಒರೆಸಿಕೊಂಡು ಬಿಟ್ಟು, ಅವರು ಕೊಡೊ ತಿಂಡಿಗಳನ್ನು ನನ್ನ ಚಡ್ಡಿ ಜೇಬಲ್ಲಿ ಹಾಕಿಕೊಂಡು ಖುಷಿಯಾಗಿ ಒಬ್ನೇ ತಿನ್ನಾಕಿದ್ದೆ. ಆ ಚಡ್ಡಿ ಚರಂಡಿ ಕೊಳ್ಕು ನೀರಲ್ಲಿ ಒದ್ದೆಯಾಗಿರುತ್ತಿತ್ತು, ದೇವರೇ ಈಗ ಅದನ್ನೆಲ್ಲಾ ನೆನೆದರೆ ಮೈ ನಡುಗುತ್ತದೆ. ಆ ತಿಂಡಿಗೊಸ್ಕರನೇ ಖುಷಿಯಾಗಿ ಚರಂಡಿಗಿಳಿಯುತ್ತಿದ್ದೆ. ದಿನವೂ ಚೆಂಡು ಚರಂಡಿಗೆ ಬೀಳಲಿ ಅಂತ ಬೇಡಿಕೊತಿದ್ದೆ.

ಒಮ್ಮೊಮ್ಮೆ ಸಂಜೆ ಹೊತ್ತು ಅವ್ವ ಅವರಿವರ ಮನೆಯಿಂದ ತಿರಿದು ತಂದ ಅಸಿಟ್ಟು ತೊಳಸಿ ಮುದ್ದೆ ಮಾಡೋಳು. ಸಾರೆಂಬ ನೀರಿಗೆ ಉಪ್ಪು ಕದರಿಕೊಂಡು ಬಿಸಿ ಬಿಸಿ ಮುದ್ದೆನ ತಿಂದು ಮಕಂಬಿಟ್ಟರೆ ಗಡದ್ ನಿದ್ದೆ. ಕೆಲವೊಮ್ಮೆ ಮಡ್ಕೆಗಳು ಒಂದರ ನಂತರ ಮತ್ತೊಂದು 'ಠಳ್ ಠಳ್' ಎಂದು ಸದ್ದು ಮಾಡುತ್ತಾ ನೆಲಕ್ಕೆ ಅಪ್ಪಳಿಸಿ ಸತ್ತು ನೆಲ ಕಚ್ಚುತ್ತಿದ್ದವು. ಆ ಸದ್ದಿನೊಂದಿಗೆ ಅಪ್ಪನ ಕರ್ಕಶ ದನಿ, 'ಬೇವರ್ಸಿ ಮುಂಡೆ, ಎಲ್ಲೇ ಹೋಗಿದ್ದೆ? ನಂಗೆ ಉಣ್ಣಕ್ಕಿಡದೆ ಆಟ ಆಡ್ತೀಯ ಅಲಾಲ್ ಕೋರಿ' ಎನ್ನುತ್ತಾ ತೂರಾಡಿಕೊಂಡೇ ಅವ್ವನನ್ನು ಸದೆ ಬಡೀತ್ತಿದ್ದ. ಕುಡ್ದು ತೂರಾಡುತ್ತಿದ್ದರೂ ಬಡಿಯೋಕೆ ಸಕ್ತಿ ಅದೆಲ್ಲಿರುತ್ತಿತ್ತೋ ನಾ ಕಾಣೆ. ಅವ್ವನೂ ಏನೂ